(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಒಂದು ಸಾರಿ ಹೇಳಿದರೆ ಅರ್ಥ ಮಾಡಿಕೊಳ್ಳಬೇಕು. ನಿಮಗೆ ಹಾಗೆಯೇ ಬಹಳ ಜನ ಗಮನಸೆಳೆಯುವ ಸೂಚನೆ ಕೊಟ್ಟಿದ್ದಾರೆ. ಅವರೆಲ್ಲಾ ಕೇಳಿ ಆದ ಮೇಲೆ ನಾನು ಅವಕಾಶ ಮಾಡಿಕೊಡುತ್ತೇನೆ. ಇದು ರಾಜ್ಯವ್ಯಾಪಿ ಬಹಳ ಗಂಭೀರವಾದ ಸಮಸ್ಯೆ ಎಂದು ಹೇಳುತ್ತಿದ್ದೇನೆ. ಅವರಿಗೆಲ್ಲಾ ಒಂದೆರಡು ನಿಮಿಷ ಅವಕಾಶ ಕೊಟ್ಟು, ನಂತರ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಇ) ವಿಷಯ: ಹತ್ತು ಸಾವಿರ ರೂಪಾಯಿಗಳ ಕಾಮಗಾರಿಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಟೆಂಡರ್ ಕರೆಯುವ ಬಗ್ಗೆ.

ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ಹತ್ತು ಸಾವಿರ ರೂಪಾಯಿಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಟೆಂಡರ್ ಕರೆಯುವ ಬಗ್ಗೆ ಗಮನ ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ರನ್ವಯ ರೂ. 10,000/– ಕ್ಕೆ ಮೇಲ್ಪಟ್ಟು ವೆಚ್ಚದ ಕಾಮಗಾರಿಗಳಿಗೆ ಟೆಂಡರ್ ಕರೆಯುವ ಬಗ್ಗೆ ಹೊರಡಿಸಿದ್ದ ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ/190/ಜಿಪಸ/2005 ದಿನಾಂಕ: 19–8–2005ನ್ನು ಚುನಾಯಿತ ಪ್ರತಿನಿಧಿಗಳ ಕೋರಿಕೆ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಹಿಂಪಡೆಯಲಾಗಿದೆ."

ಶ್ರೀ ಅಂಜನ ಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ 10,000 ರೂಪಾಯಿಗಳ ಕಾಮಗಾರಿಗೂ ಟೆಂಡರ್ ಕರೆಯಬೇಕೆಂದು ಸರ್ಕಾರದ ಆದೇಶ ಬಂದಿದೆ ಎಂದು ತಿಳಿದು ಬಂದಿದೆ. ನಾವು ಕಳೆದ ದಿನಗಳಲ್ಲಿ ಪಂಚಾಯಿತಿ ವ್ಯವಸ್ಥೆಗೆ ಹೆಚ್ಚಿನ ಒತ್ತು ಕೊಟ್ಟಿದ್ದೇವೆ. ಇದಕ್ಕೆ ಸುಮಾರು 19 ಇಲಾಖೆಗಳನ್ನೂ ಸೇರಿಸಿದ್ದೇವೆ. ಇದರಲ್ಲಿ 10,000 ರೂಪಾಯಿಗಳಿಗೂ ಟೆಂಡರ್ ಕರೆಯುತ್ತಾ ಹೋದರೆ, ನಿಜವಾಗಿ ಕೆಲಸಗಳು ಆಗುವುದಿಲ್ಲ. ಇದಕ್ಕೆ ಏನು ಸುತ್ತೋಲೆ ಹೊರಡಿಸಿದ್ದೀರಿ ಇದು ಸರಿಯಲ್ಲ. ಎರಡು ಲಕ್ಷ ಅಥವಾ ಒಂದು ಲಕ್ಷದ ಮೇಲೆ ಇರತಕ್ಕಂತಹ ಕಾಮಗಾರಿಗಳಿಗೆ ಮಾತ್ರ ಟೆಂಡರ್ ಕರೆಯಬೇಕೆಂದು ಹಿಂದೆ ಸುತ್ತೋಲೆ ಹೊರಡಿಸಿದ್ದಾರೆ. ಅದು ಬಿಟ್ಟು ಪಂಚಾಯಿತಿ ವ್ಯವಸ್ಥೆಯಲ್ಲಿ 10,000 ರೂಪಾಯಿಗೂ ಸಹ ಟೆಂಡರ್ ಕರಯಬೇಕೆಂದು ಹೇಳಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ದಿನಾಂಕ: 19–8–2005 ರಂದು ಕರ್ನಾಟಕ ಸರ್ಕಾರದ ಒಂದು ಸುತ್ತೋಲೆ ಹೊರಡಿಸಿ, ತಕ್ಷಣದಿಂದ ಅದನ್ನು ರದ್ದು ಮಾಡಿದ್ದೇವೆ. ಹಿಂದಿನ ವ್ಯವಸ್ಥೆಯನ್ನು ಮುಂದುವರೆಸುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ನನ್ನ ಗಮನ ಸೆಳೆಯುವ ಸೂಚನೆ ಇದೆ.

ಅಧ್ಯಕ್ಷರು : ನಿಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಸಮಯ ಕೇಳಿದ್ದಾರೆ. ಶೆಟ್ಟರ್‌ರವರೇ, ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದರು. ನೀವು ಅದಕ್ಕೆ ಸಮಯ ಕೇಳಿದ್ದೀರಿ. ನೀವು ಅವರಿಗೆ ಕನ್‌ವಿನ್ಸ್ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗ ಜ್ಞಾನೇಂದ್ರರವರು ಏನು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದಾರೆ ಅದರಲ್ಲಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕೆಲವು ಮಾಹಿತಿಗಳಿವೆ. ಅರಣ್ಯ ಇಲಾಖೆಯಿಂದ ನಾವು ಮಾಹಿತಿಗಳನ್ನು ಕೇಳಿದ್ದೆವು. ಅವರು ಪೂರ್ಣ ಮಾಹಿತಿಯನ್ನು ಕೊಟ್ಟಿಲ್ಲ. ಹಾಗಾಗಿ ನಾನು ಸಮಯಾವಕಾಶ ಕೇಳಿದ್ದೇನೆ. ಇದಕ್ಕಾಗಿ ನಾನು ಮಾನ್ಯ ಅರಗ ಜ್ಞಾನೇಂದ್ರರವರಲ್ಲಿ ವಿನಂತಿ ಮಾಡುತ್ತೇನೆ. ಅವರ ಸಮಸ್ಯೆ ಏನೆಂದು ನನಗೆ ಅರ್ಥವಾಗಿದೆ. ಅವರ ಕ್ಷೇತ್ರದ ಯಾವ ರೆವಿನ್ಯೂ ಲ್ಯಾಂಡ್ ಇತ್ತು. ಅದನ್ನು ಅರಣ್ಯ ಭೂಮಿ ಎಂದು ಡಿಕ್ಲೇರ್ ಮಾಡಿದ್ದಾರೆ. ಇದು 1965ರಲ್ಲಿ ಆಗಿದ್ದಾರೆ. ಪೊಸಿಷನ್ ಕೊಟ್ಟಿದ್ದಾರೆ, ಅದರ ಬಗ್ಗೆ ಅವರು ಗಮನ ಸೆಳೆದಿದ್ದಾರೆ. ಇದರ ಬಗ್ಗೆ ವಿವರಗಳನ್ನು ತೆಗೆದುಕೊಂಡು ಬಂದು ಅದು ಕಾನೂನು ರೀತಿಯೊಳಗೆ ಏನಾದರೂ ಮಾಡುವುದಕ್ಕೆ ಸಾಧ್ಯ ಇದ್ದರೆ ನಾನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಜ್ಞಾನೇಂದ್ರರವರೇ, ಅವರು ವಿವರ ಕೇಳಿದ್ದಾರೆ. ನಿಮ್ಮನ್ನು ಕರೆದು ಮಾತನಾಡಿ. ಕಾನೂನಿನ ಅಧಿಕಾರಿಗಳನ್ನು ಕರೆದು ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಈ ಸದನದಲ್ಲಿ 1965ನೇ ಇಸವಿಯಲ್ಲಿ ಎಂ.ಎಸ್. ಬಿಲ್ಡಿಂಗ್‌ನಲ್ಲಿ ಕೂತು ಮಾಡಿದ ಸಭೆಯ ಪ್ರೊಸೀಡಿಂಗ್ಸ್. ಇಡೀ ಹೊಸನಗರ ತಾಲ್ಲೂಕು ಅದರೊಳಗಡೆ ಇದೆ. ಊರು ಇದೆ ಎಂದು ನೋಡಲಿಲ್ಲ, ಶಾಲೆ ಇದೆ ಎಂದು ನೋಡಲಿಲ್ಲ. ಸಾವಿರಾರು ಎಕರೆ ಭೂಮಿಯನ್ನು ಫಾರೆಸ್ಟ್‌ಗೆ ಹಸ್ತಾಂತರ ಮಾಡಿದ್ದಾರೆ. ಸುದೈವವಶಾತ್ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಇನ್ನು ನೋಟಿಫಿಕೇಷನ್ ಮಾಡಲಿಲ್ಲ. ಆದ್ದರಿಂದ ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ. ಆ ಪ್ರೊಸೀಡಿಂಗ್ಸ್ ವಿತ್‌ಡ್ರಾ ಮಾಡಿಕೊಳ್ಳಿ. ಥಿಕ್ ಫಾರೆಸ್ಟ್ ಯಾವುದಿದೆ ಅದನ್ನು ಅವರಿಗೆ ವಾಪಸ್ ಕೊಡಿ. 3 ಕೆವಿ ಇರತಕ್ಕಂಥದ್ದನ್ನು ರೆವಿನ್ಯೂನಲ್ಲಿ ಉಳಿಸಿಕೊಳ್ಳಿ. ಏಕೆಂದರೆ ನಮ್ಮದು ನಕ್ಸಲೈಟ್ ಏರಿಯಾ. ಅಲ್ಲಿಯ ಜನರನ್ನು ಕೋವಿ ಹಿಡಿದುಕೊಂಡು ಎಬ್ಬಿಸುವುದಕ್ಕೆ ಇಷ್ಟು ಪ್ರಚೋದನೆ ಸಾಕಾಗುತ್ತದೆ.

ಅಧ್ಯಕ್ಷರು : ನಕ್ಸಲೈಟ್‌ರಿಂದ ನಿಮಗೇನೂ ತೊಂದರೆಯಾಗುವುದಿಲ್ಲ ಬಿಡಿ. ಧೈರ್ಯವಾಗಿರಿ.

ಶ್ರೀ ಅರಗ ಜ್ಞಾನೇಂದ್ರ : ತೊಂದರೆಯಾಗುವುದಿಲ್ಲ, ನಾಳೆ ಸರ್ಕಾರಕ್ಕೆ ಏನಾಗುತ್ತದೆ ಎಂದು ನೋಡಿ. ಅಲ್ಲಿ ಜನರ ನೆಮ್ಮದಿ ಹಾಳಾಗಿ ಹೋಗುತ್ತದೆ. ಅಧಿಕಾರಿಗಳು ಇಲ್ಲಿ ಕುಳಿತು ಅಧಿಕಾರ ಚಲಾಯಿಸುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಅರಗ ಜ್ಞಾನೇಂದ್ರರವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. 1965ನೇ ಇಸವಿಯಲ್ಲಿ ಏನು ಅರಣ್ಯ ಭೂಮಿ ಎಂದು ಪರಿವರ್ತನೆ ಮಾಡುವ ಆಜ್ಞೆ ಆಗಿದೆ, ಅದು ನೋಟಿಫಿಕೇಷನ್ ಆಗಿಲ್ಲ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ಮತ್ತು ಸಾಕಷ್ಟು ಜಮೀನುಗಳಲ್ಲಿ ಬಿಲ್ಡಿಂಗ್‌ಗಳು ಇದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅಂತಹ ಜಮೀನುಗಳು ಕೂಡ ಇವೊತ್ತು ಫಾರೆಸ್ಟ್ ಲ್ಯಾಂಡ್ ಎಂದು ಡಿಕ್ಲೇರ್ ಆಗಿವೆ ಅಥವಾ ಆ ರೀತಿಯಲ್ಲಿ ಪ್ರೊಸಿಡಿಂಗ್ಸ್ ಆಗಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಹೀಗಾಗಿ ನಾನು ಅರಗ ಜ್ಞಾನೇಂದ್ರರವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರೂ ಬರಲಿ, ಅಧಿಕಾರಿಗಳನ್ನೂ ಕರೆಸುತ್ತೇನೆ. ಯಾವುದು ನೋಟಿಫಿಕೇಷನ್ ಆಗಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದ್ದಾರೆ. ಆ ವಿಚಾರದಲ್ಲಿ ಕಾನೂನು ವ್ಯಾಪ್ತಿಯಲ್ಲಿ ಅದರ ಬಗ್ಗೆ ವಿಚಾರಣೆ ಮಾಡಿಕೊಂಡು ಕಾನೂನು ವ್ಯಾಪ್ತಿಯೊಳಗೆ ಅದನ್ನು ಡ್ರಾಪ್ ಮಾಡುವುದಕ್ಕೆ ಸಾಧ್ಯವಿದ್ದರೆ ಅದಕ್ಕೊಂದು ಪರಿಹಾರ ಹುಡುಕುವುದಕ್ಕೆ ಸರ್ಕಾರ ಸಿದ್ದವಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ಎಂ.ವೈ. ಪಾಟೀಲ್.

(ಸದನದಲ್ಲಿ ಹಾಜರಿರಲಿಲ್ಲ)

(ಈ) ವಿಷಯ: ಕೆ.ಜಿ.ಎಫ್. ಸಹಕಾರಿ ಸಂಸ್ಥೆಗೆ ಸೇರಿದ ಆಸ್ತಿಯನ್ನು ಖಾಸಗಿ ಯವರು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಬಗ್ಗೆ.

SRI S. RAJENDRAN (K.G.F.) : Sir, I call the attention of the Hon'ble Chief Minister regarding the unauthorised occupation of the property belonging to the liquidated K.G.F. Co-operative Society by M/s Saravanna T.V. Agencies.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್. ಟೌನ್ ಸಹಕಾರ ಸಂಘ, ನಿಯಮಿತ ಕೆ.ಜಿ.ಎಫ್. ರಾಬರ್ಟ್ಸನ್‌ಪೇಟೆ, ಅಂಬೇಡ್ಕರ್ ರಸ್ತೆ, ಈ ಸಂಘವು ತನ್ನ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿದ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಕೋಲಾರ, ಇವರು ಸಂಖ್ಯೆ ಡಿಆರ್‌ಕೆ: ಎಲ್‌ಕ್ಯೂಡಿ: ಸಿಆರ್ 67: 2005–2006, ದಿನಾಂಕ: 25–8–2005ರಲ್ಲಿ ಸಮಾಪನಗೊಳಿಸಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ, ಇವರನ್ನು ಸಮಾಪನಾಧಿಕಾರಿಯಾಗಿ ನೇಮಿಸಿದ್ದಾರೆ. ಸಮಾಪನಾಧಿಕಾರಿಗಳು ದಿನಾಂಕ: 05–11–2005ರಲ್ಲಿ ಪ್ರಭಾರ ವಹಿಸಿಕೊಂಡಿರುತ್ತಾರೆ. ಈ ಸಂಘದ ಭಾಗಶಃ ಆಸ್ತಿಯನ್ನು ಶ್ರೀ ಶರವಣರವರು ತನ್ನ ವಶದಲ್ಲಿಟ್ಟುಕೊಂಡಿರುವುದು ಸಮಾಪನಾಧಿಕಾರಿಗಳ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ದಾಖಲೆ ಪರಿಶೀಲಿಸಿ ಸೂಕ್ತ ಕ್ರಮ ನೀಡುವಂತೆ ಸಮಾಪನಾಧಿಕಾರಿಗಳಿಗೆ ಸೂಚಿಸಲಾಗಿದೆ. ಶ್ರೀ ಶರವಣ, ಇವರು ಸಂಘದ ಆಸ್ತಿಯನ್ನು ಅನಧಿಕೃತವಾಗಿ ತನ್ನ ವಶದಲ್ಲಿಟ್ಟುಕೊಳ್ಳಲು